ನಾಯಿಯೂ ಸಹ ರಾಜಕುಮಾರಿಯನ್ನು ತಂದು ಅರಮನೆಗೆ ತಲುಪಿಸಿತು. ಆದರೆ, ಮರಳಿ ಹೋಗುವಾಗ ಬಾಗಿಲಿನ ಮೇಲೆ ಬಳಪದ ಚಿಹ್ನೆಯನ್ನು ನೋಡಿತು. ತಕ್ಷಣ ಅಲ್ಲಿ ಊರಿನಲ್ಲಿ ಇರುವ ಎಲ್ಲಾ ಮನೆಯ ಬಾಗಿಲಿನ ಮೇಲೆ ಬಳಪದ ಚಿಹ್ನೆಯ ಗುರುತು ಮಾಡಿತು.

ಮಾರನೆಯ ದಿನ ಬೆಳಿಗ್ಗೆ ವೃದ್ಧದಾಸಿಯು, ರಾಜ, ರಾಣಿ ಹಾಗೂ ಅರಮನೆಯ ಅಧಿಕಾರಿಗಳೊಡನೆ ತಾನು ಗುರುತು ಮಾಡಿದ ಮನೆಯನ್ನು ತೋರಿಸಲು ಬಂದಳು. ಆದರೆ ಅವರಿಗೆಲ್ಲ ಆಶ್ಚರ್ಯ ಕಾದಿತ್ತು. ಅಲ್ಲಿರುವ ಎಲ್ಲಾ ಮನೆಯ ಬಾಗಿಲ ಮೇಲೆ ಅದೇ ಗುರುತು ಮಾಡಲಾಗಿತ್ತು, ಅವಳು ಎಷ್ಟು ಪ್ರಯತ್ನ ಪಟ್ಟರೂ ರಾತ್ರಿ ಅವಳು ಗುರುತು ಹಾಕಿದ ಬಾಗಿಲು ಸಿಗಲೇ ಇಲ್ಲ. ರಾಜ, ರಾಣಿಯರೆಲ್ಲಾ ನಿರಾಸೆಯಿಂದ ಮರಳಿದರು.

ಆದರೆ, ರಾಣಿ ಜಾಣೆಯಾಗಿದ್ದಳು, ಅವಳು ತನ್ನಲ್ಲಿ ಇದ್ದ ಒಂದು ಕತ್ತರಿಯಿಂದ ರೇಷ್ಮೆ ಬಟ್ಟೆಯನ್ನು ಕತ್ತರಿಸಿದಳು ಅದರಿಂದ ಒಂದು ಚೀಲ ಹೊಲಿದಳು. ಅದರಲ್ಲಿ ಗೋಧಿ ಹಿಟ್ಟನ್ನು ತುಂಬಿ ರಾಜಕುಮಾರಿಯ ಬೆನ್ನಿಗೆ ಕಟ್ಟಿದಳು, ಅದರಲ್ಲಿ ಒಂದು ಸಣ್ಣ ರಂಧ್ರ ಮಾಡಿದಳು. ರಾಜಕುಮಾರಿ ಎಲ್ಲೇ ಹೋದರೂ ಗೋಧಿ ಹಿಟ್ಟು ಸೋರಿ ರಾಜಕುಮಾರಿ ಹೋದ ದಾರಿ ತೋರಿಸುವಂತಿರಬೇಕು ಹಾಗೆ ಮಾಡಿದಳು.

ಮರುದಿನ ರಾತ್ರಿಯೂ ನಾಯಿ ರಾಜಕುಮಾರಿ ಇರುವ ತಾಮ್ರದ ಕೋಟೆಗೆ ಬಂದಿತು. ರಾಜಕುಮಾರಿಯನ್ನು ತನ್ನ ಬೆನ್ನಮೇಲೆ ಹೇರಿಕೊಂಡು ಸೈನಿಕನ ಮನೆಗೆ ಬಂದಿತು. ಆದರೆ, ಗೋಧಿ ಹಿಟ್ಟು ಬಿದ್ದು ಮಾಡಿದ ಗುರುತು ಗಮನಿಸಲಿಲ್ಲ. ಸೈನಿಕನೋ ರಾಜಕುಮಾರಿಯನ್ನು ಬಿಟ್ಟಿರಲಾರ. ಅವಳನ್ನು ಮದುವೆಯಾಗಲು ಬಯಸುತ್ತಾನೆ. ತಾನೂ ಓರ್ವ ರಾಜಕುಮಾರನಾಗಿದ್ದಿದ್ದರೆ? ರಾಜಕುಮಾರಿಯನ್ನು ಮದುವೆಯಾಗಬಹುದಾಗಿತ್ತು, ಆದರೆ ತಾನು ಒಬ್ಬ ಸಾಮಾನ್ಯ ಸೈನಿಕ ಏನೂ ಮಾಡಲೂ ತೋಚದೆ ರಾಜಕುಮಾರಿಯನ್ನು ಚುಂಬಿಸಿ ಕಳುಹಿಸಿಕೊಟ್ಟನು.

ಮಾರನೆಯ ದಿನ ಬೆಳಿಗ್ಗೆ ರಾಜದಂಪತಿ ಸುಲಭವಾಗಿ ತಮ್ಮ ಮಗಳು ಹೋದ ಮನೆಯನ್ನು ಕಂಡು ಹಿಡಿದರು, ರಾಜಭಟರು ಬಂದು ಸೈನಿಕನನ್ನು ಸೆರೆಮನೆಯಲ್ಲಿ ಇಟ್ಟರು. ಅದು ಕತ್ತಲೆಯ ಕೋಣೆ, ರಾಜಭಟರು ಹೇಳಿದರು: 'ನಾಳೆ ನಿನಗೆ ಗಲ್ಲು ಶಿಕ್ಷೆ'. ಅವನಿಗೆ ಮೃತ್ಯು ಮುಂದೆ ಬಂದು ನಿಂತಂತಾಯಿತು. ಅವನ ಮಾಂತ್ರಿಕ ಪೆಟ್ಟಿಗೆ ಅವನ ಮನೆಯಲ್ಲಿಯೇ ಇತ್ತು. ರಾತ್ರೆಯೆಲ್ಲಾ ಕಾರಾಗೃಹದಲ್ಲಿಯೇ ಕಳೆದ. ಬೆಳಿಗ್ಗೆ ಜೈಲಿನ ಕೊಠಡಿಯಲ್ಲಿ ಇರುವ ಒಂದು ಸಣ್ಣ ಕಿಟಕಿಯ ಮೂಲಕ ಸೈನಿಕ ನೋಡಿದ. ಊರ ಜನರೆಲ್ಲಾ ಊರ ಹೊರಗೆ ಇರುವ ವಧಾ ಸ್ಥಾನದೆಡೆಗೆ ವೇಗವಾಗಿ ನಡೆದು ಹೋಗುತ್ತಿದ್ದಾರೆ. ಹಲವಾರು ವಾದ್ಯಗಳನ್ನು ಬಾರಿಸುತ್ತಾ ಸೈನಿಕರು ವಧಾ ಸ್ಥಾನದ ಕಡೆಗೆ ಹೋಗುತ್ತಿದ್ದರು. ಈ ಸೈನಿಕನನ್ನು ಗಲ್ಲಿಗೇರಿಸುವುದನ್ನು ನೋಡುವ ಆತುರದಲ್ಲಿ ಊರ ಜನರು ಆತುರ ಆತುರವಾಗಿ ಹೋಗುತ್ತಿದ್ದರು. ಹೀಗೆ, ಓಡುತ್ತಿರುವ ಜನರಲ್ಲಿ ಓರ್ವ ಚಪ್ಪಲಿ ಮಾಡುವ ಚಮಗಾರರ ಬಾಲಕ ಚರ್ಮದ ಮೇಲಂಗಿ ಮತ್ತು ಚಪ್ಪಲಿ ಧರಿಸಿಕೊಂಡು ಆತುರದಲ್ಲಿ ಓಡುತ್ತಿದ್ದ. ಅವನು ಹಾಗೆ ಓಡುತ್ತಿದ್ದಾಗ ಅವನ ಒಂದು ಚಪ್ಪಲಿ ಕಾಲಿನಿಂದ ಕಳಚಿ ಹೋಯಿತು ಮತ್ತು ಈ ಸೈನಿಕನ ಕಿಟಕಿಯ ಹತ್ತಿರವೇ ಬಂದು ಬಿದ್ದಿತು. ಅದನ್ನು ತೆಗೆದುಕೊಳ್ಳಲು ಆ ಚಮ್ಮಾರರ ಬಾಲಕ ಕಿಟಕಿಯ ಹತ್ತಿರ ಬಂದ. ಕಬ್ಬಿಣದ ಕಂಬಿಗೆ ಆನಿಸಿ ನಿಂತ ಸೈನಿಕ ಆ ಬಾಲಕನಿಗೆ ಕೇಳಿಸುವಂತೆ ಹೇಳಿದ: 'ಹೇ ಹುಡುಗನೇ ಕೇಳು, ಆತುರ ಪಡಬೇಡ, ನಾನು ಇನ್ನೂ ಇಲ್ಲಿಯೇ ಇದ್ದೇನೆ. ಉರುಳು ಹಾಕಲು ಇನ್ನೂ